ಪ್ರಶ್ನೆ. ಅದು ಮುಂದಕ್ಕೆ ಹೋಯಿತು. ಯಾವ ಪಕ್ಷದ ಸದಸ್ಯರೇ ಆಗಿರಲಿ, ಸದಸ್ಯರ ಹಕ್ಕಿನ ಚಲಾವಣೆ ಪ್ರಶ್ನೆ ಬರುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರದಿಂದ ಸೌಜನ್ಯತೆಯ ಮಾತು ಬರಲಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಇರಬಹುದು ಅಥವಾ ಪ್ರೊಫೆಸರ್ ಲಕ್ಷ್ಮೀಸಾಗರ್‌ರವರು ಇರಬಹುದು. ಉತ್ತರಗಳು ಬರುವುದಕ್ಕೆ ತಡವಾಗಿದೆ, ಅದಕ್ಕಾಗಿ ವಿಷಾಧಿಸುತ್ತೇವೆ ಎಂದು ಸೌಜನ್ಯಯುತವಾದ ಒಂದು ಮಾತು ಕೂಡ ಬರದೇ ಇರತಕ್ಕಂಥ ಸರ್ಕಾರಕ್ಕೆ ನೀವು ಭೀಮಾರಿ ಹಾಕದೇ ಇದ್ದೀರಲ್ಲಾ, ನಾವು ಹೇಗೆ ತಡೆದುಕೊಳ್ಳಬೇಕು ? ತಮ್ಮಿಂದ ನಮ್ಮ ಹಿತರಕ್ಷಣೆ ಆಗಬೇಕು. ಒಂದು ಮಾತನ್ನು ಹೇಳುತ್ತೇನೆ. ಯಾವ ಯಾವ ಪ್ರಶ್ನೆಗಳನ್ನು ಮುಂದಕ್ಕೆ ಹಾಕಿದಿರಿ ಅವುಗಳನ್ನು ಈ ಸಿಟ್ಟಿಂಗ್ ಮುಗಿಯುವುದರೊಳಗೆ ತಂದು ಉತ್ತರಗಳನ್ನು ಒದಗಿಸಿ.

ಅಧ್ಯಕ್ಷರು.—ನಾನೂ ಹೇಳುತ್ತಿದ್ದೇನೆ ಅವರೂ ಅಷ್ಯೂರೆನ್ಸ್ ಕೊಟ್ಟಿದ್ದಾರೆ ಪ್ರಯತ್ನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ನಾವೂ ನೀವೂ ಮಾಡುವುದಲ್ಲ. ನೀವು ತರಿಸುವ ಹಾಗಿದ್ದರೆ ನಾವೇಕೆ ಪ್ರಶ್ನೆ ಹಾಕಬೇಕಿತ್ತು.

ಸೈಟಿಂಗಳನ್ನು ಹಂಚುವ ಬಗ್ಗೆ

೫೬(೧೫೬) ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೫-೮೬ರಲ್ಲಿ ಳನೇ ದರ್ಜೆಯ ಹರಿಜನ ಸರ್ಕಾರಿ ನೌಕರರಿಗೆ ಕಡಿಮೆ ಬೆಲೆಯಲ್ಲಿ ನಿವೇಶನ ಕೊಡುವ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ಮೇರೆಗೆ ಈ ವರೆವಿಗೂ ಎಷ್ಟು ಜನರಿಗೆ ನಿವೇಶನಗಳನ್ನು ಹಂಚಲಾಗಿದೆ ?

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಳನೇ ದರ್ಜೆ ಸರ್ಕಾರಿ ನೌಕರರಿಗೆ ನಿವೇಶನ ಹಂಚಿಕೆಯ ಬಗ್ಗೆ ರಿಯಾಯ್ತಿ ಕೊಡುವ ವಿಚಾರದಲ್ಲಿ ೧೯೮೫-೮೬ ರಲ್ಲಿ ಯಾವುದೇ ನಿರ್ಣಯವನ್ನು ಕೈಗೊಂಡಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾಲ್ಕನೇ ದರ್ಜೆಯ ಹರಿಜನ ಗಿರಿಜನ ನೌಕರರಿಗೆ ಸೈಟ್ ಕೊಡಬೇಕೆಂದು ತೀರ್ಮಾನವನ್ನು ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದೆ. ಅವರು ಎಲ್ಲಾ ನಾಲ್ಕನೇ ದರ್ಜೆಯ ನೌಕರರನ್ನು ಸೇರಿಸಿ ಹೇಳುತ್ತಿದ್ದಾರೆ. ಇದನ್ನು ಇನ್ನು ಮುಂದಾದರೂ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮಿಸಾಗರ್.—ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಜ್ಞೆ ದಿನಾಂಕ ೧೮-೮-೮೪ರ ಪ್ರಕಾರ ಅವರು ನಿಯಮಾವಳಿಗಳನ್ನು ಮಾಡಿಕೊಂಡಿದ್ದಾರೆ. ಆ ನಿಯಮಾವಳಿ ಪ್ರಕಾರ ಹರಿಜನ ನಿಮ್ನವರ್ಗದವರಿಗೆ ಸೇರಿದಂತಹವರಿಗೆ ಒಟ್ಟು ವಿಲೇವಾರಿ ಮಾಡತಕ್ಕಂತಹ ಖಾಲಿ ನಿವೇಶನಗಳಲ್ಲಿ ಶೇಕಡ ೧೩ ರಷ್ಟನ್ನು ಕೊಡಬೇಕೆಂದು ಇದೆ. ಮಾನ್ಯ ಕಾನಡೆಯವರು ನಾಲ್ಕನೆದರ್ಜೆ ಹರಿಜನ ಗಿರಿಜನ ನೌಕರರಿಗೆ ಪ್ರತ್ಯೇಕವಾಗಿ ಏನಾದರೂ ಮಾಡುತ್ತೀರಾ ಎಂದು ಕೇಳಿದರು. ಆ ಗುಂಪಿಗೆ ಸೇರಿದಂತಹ ಜನರಿಗೆ ಅವಕಾಶವಿದೆಯೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದಾದರೂ ಮಾಡುತ್ತೀರಾ ಎಂದು ಕೇಳಿದ್ದಾರೆ. ಇದು ಕಾನೂನು ಚೌಕಟ್ಟಿನಲ್ಲಿ ಬರುತ್ತದೆಯೇ ಎನ್ನುವುದನ್ನು ವಿಚಾರ ಮಾಡುತ್ತೇನೆ.

ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಗ್ಗೆ

೫೭(೨೯೪) ಶ್ರೀ ರಾಜು ಗೌಡ (ಹನ್ನೂರ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ನಗರದಲ್ಲಿ ಎಷ್ಟು ಕೊಳಚೆ ಪ್ರದೇಶಗಳಿವೆ?